ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-5 Issue 6, May-June, 2024, Pp. 51-64**
**©*IIMRD*, Mysuru**

**www.iimrd.com**

# ವಚನ ಸಾಹಿತ್ಯದಲ್ಲಿನ ಜೀವನ ಮೌಲ್ಯಗಳು

**ಡಾ. ಚೆಲುವರಾಜು**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಕೋಟೆ.

**ಸಾರಾಂಶ: (Abstract)**

*ವಚನ ಎನ್ನವುದು ಸಂಸ್ಕೃತ ಪದ. ಸಂಸ್ಕೃತದಲ್ಲಿ ಈ ಪದಕ್ಕೆ ಮಾತು, ಮಾತನಾಡುವುದು ಎಂಬ ಅರ್ಥಗಳಿವೆ. ಕನ್ನಡದಲ್ಲಿ ವಚನ ಪದಕ್ಕೆ 'ಪ್ರಮಾಣ, ಆಣೆ, ಗದ್ಯ' ಎನ್ನುವ ಅರ್ಥಗಳಿವೆ. ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ ವಚನ ಎಂಬ ಈ ಪದ ಚಂಪೂ, ಷಟ್ಪದಿ, ಸಾಂಗತ್ಯ ಇತ್ಯಾದಿಗಳಂತೆ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ ಎಂಬ ಅರ್ಥದಲ್ಲಿ ಬಳಕೆಗೊಂಡಿದೆ. ಗದ್ಯ ಮತ್ತು ಪದ್ಯಗಳೆರಡರ ಮದ್ಯದ ಒಂದು ಮಾದರಿ ಕಾವ್ಯ ರಚನೆಯಾಗಿ ಈ ವಿಶಿಷ್ಟ ಸಾಹಿತ್ಯ ಪ್ರಕಾರ ಕನ್ನಡದಲ್ಲಿ ಬೆಳೆದುಬಂದಿದೆ. ಕರ್ನಾಟಕದ ರಾಜಕೀಯ ಮತ್ತು ಧಾರ್ಮಿಕ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನ ಒಂದು ಯುಗ ಪರಿವರ್ತನೆಯ ಸಂಧಿಕಾಲ. ಅನೇಕ ದೃಷ್ಟಿಗಳಿಂದಾಗಿ ಈ ಯುಗಕ್ಕೆ ಮಹತ್ವವಿದೆ. ಸಾಮ್ರಾಜ್ಯಗಳ ಅವನತಿಯೊಂದಿಗೆ ಯುಗ ಧರ್ಮವಾದ ಜೈನಧರ್ಮದ ನಿಸ್ತೇಜ, ಹೊಸ ಯುಗಧರ್ಮವಾದ ಶೈವಧರ್ಮದ ಪ್ರಾಬಲ್ಯ ಮೆರೆದ ಕಾಲ. ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಲ್ಲಿನ ವಾದ–ಪ್ರತಿವಾದ, ಕ್ರಿಯೆ–ಪ್ರತಿಕ್ರಿಯೆ, ಸಂಘರ್ಷ–ಸಾಮರಸ್ಯಗಳು ಆಂದೋಲನದ ಸ್ವರೂಪವನ್ನು ತಾಳಿ ಸಾಹಿತ್ಯದ ಮೇಲೆ ಆಳವಾದ ಪ್ರಭಾವವನ್ನು ಬೀರಿದ ಸಂಕ್ರಮಣ ಕಾಲ. ಈ ಧಾರ್ಮಿಕ, ಸಾಮಾಜಿಕ ಸಂಘರ್ಷದ ಫಲಶ್ರುತಿಯಾಗಿ ಮೂಡಿ ಬಂದದ್ದೇ ವಿಶಿಷ್ಟವಾದ ವಚನ ಸಾಹಿತ್ಯ ಪ್ರಕಾರವಾಗಿದೆ.*

**ಮುಖ್ಯಪದಗಳು (Keywords): ಕನ್ನಡ ಸಾಹಿತ್ಯ, ವಚನಗಳು,** ಬಸವಣ್ಣ ಅಕ್ಕಾಮಹಾದೇವಿ.

**ಪೀಠಿಕೆ**

ಕರ್ನಾಟಕದ ರಾಜಕೀಯ ಮತ್ತು ಧಾರ್ಮಿಕ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನ ಒಂದು ಯುಗ ಪರಿವರ್ತನೆಯ ಸಂಧಿಕಾಲ. ಅಂದಿನ ಸಮಾಜದಲ್ಲಿ ರೂಢ ಮೂಲವಾಗಿದ್ದ ಮೂಢನಂಬಿಕೆ, ಅಂಧಶ್ರದ್ಧೆಯ ಆಚರಣೆಗಳನ್ನು ಬುಡ ಸಹಿತವಾಗಿ ಕಿತ್ತೆಸೆದುಬದುಕಿಗೆ ಅಗತ್ಯವಾದ ಮಾನವೀಯತೆಯನ್ನು ಆದರ್ಶಗಳನ್ನು ಜನಸಾಮಾನ್ಯರಿಗೆ ಅವರ ಭಾಷೆಯಲ್ಲಿಯೇ ಅವರಿಗೆ ತಿಳಿಯುವ ಹಾಗೆ ಸರಳವಾಗಿ ನಿರೂಪಿಸಿದುದು ವಚನ ಸಾಹಿತ್ಯದ ವೈಶಿಷ್ಟ್ಯ. ದೇವಭಾಷೆ ಜನಸಾಮಾನ್ಯರ ಮಟ್ಟಕ್ಕೆ ಇಳಿಯಲು ನಿರಾಕರಿಸಿದಾಗ ಜನಸಾಮಾನ್ಯರ ಭಾಷೆಯನ್ನೇ ದೇವಭಾಷೆಯ ಮಟ್ಟಕ್ಕೆ ಏರಿಸಿದ ಕೀರ್ತಿ ಈ ಸಾಹಿತ್ಯದ್ದು. ಸರ್ವಸಮಾನತೆಯ ತಳಹದಿಯ ಮೇಲೆ ಶೋಷಣೆ ರಹಿತ ಹೊಸ ಸುಖೀ ಸಮಾಜವೊಂದನ್ನು ರೂಪಿಸುವ ಸುಂದರವಾದ ಕನಸು

*Please cite this article as: ಚೆಲುವರಾಜು.* (2024). ವಚನ ಸಾಹಿತ್ಯದಲ್ಲಿನ ಜೀವನ ಮೌಲ್ಯಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(6). ಪು.ಸಂ.* 51–64

ಕಂಡವರು, ಮತ್ತು ಅದಕ್ಕಾಗಿ ಕಾಯ–ವಾಚ–ಮನಸಾ ಪ್ರಾಮಾಣಿಕರಾಗಿ ಹೋರಾಟ ನಡೆಸಿದವರು ಈ ಸಾಹಿತ್ಯದ ನಿರ್ಮಾತೃಗಳಾದ ವಚನಕಾರರು. ದೈವಭಕ್ತಿ ಪಂಥದ ಶಿವೋಪಾಸಕರಾದ ಶರಣರು.

ಕರ್ನಾಟಕದ ಇತಿಹಾಸದಲ್ಲಿ ಶಿವಶರಣರ ಚಳುವಳಿಯೂ ಒಂದು ಅಪೂರ್ವ ಘಟನೆ. ವಚನಗಳ ಸೃಷ್ಠಿ ಒಂದು ಅನನ್ಯ ಪ್ರಯೋಗ. ಸಮಾಜದ ಎಲ್ಲ ವರ್ಗ, ವರ್ಣಗಳ ಜನಸಮುದಾಯ ಬಸವಣ್ಣನವರ ನೇತೃತ್ವದಲ್ಲಿ ಕೈಗೊಂಡಿದ್ದ ವ್ಯಕ್ತಿ ಕಲ್ಯಾಣ ಮತ್ತು ಸಮಾಜ ಕಲ್ಯಾಣ ಚಳುವಳಿಯ ಸೃಷ್ಟಿಯೆನಿಸಿದ ಈ ವಚನಗಳು, ಜಾಗತಿಕ ಸಾಹಿತ್ಯದ ಮಹತ್ವಪೂರ್ಣ ಭಾಗವೆನಿಸಿವೆ.

ವಚನ ಚಳುವಳಿ ಕರ್ನಾಟಕದಲ್ಲಿ ಜೀವ ಪಡೆದು ಸುಮಾರು 900 ವರ್ಷಗಳಿಗೂ ಹೆಚ್ಚು ಸಮಯ ಆಗಿದ್ದರೂ ಅವು ಪ್ರಸ್ತುತ ಸನ್ನಿವೇಶಕ್ಕೆ ಹಾಗೂ ಸಮಕಾಲೀನ ಸಮಾಜಕ್ಕೆ ಸಿದ್ಧೌಷದಂತೆ ಅತ್ಯುತ್ತಮ ಚಿಕಿತ್ಸೆಯಂತೆ ಕೆಲಸ ಮಾಡುತ್ತಿವೆ. ಸಾರ್ವತ್ರಿಕ ಜೀವನ ಮೌಲ್ಯಗಳಾಗಿ ಸಮಕಾಲೀನ ಸಮಸ್ಯೆಗಳ ಪರಿಹಾರಕ್ಕೆ ಮಾರ್ಗೋಪಾಯಗಳಾಗಿವೆ ಎಂಬುದನ್ನು ಸಾಬೀತುಪಡಿಸುತ್ತಿವೆ.

ಜಾತಿಬೇದ ಪದ್ಧತಿ, ಅಸಮಾನತೆ, ಸ್ತ್ರೀ ಸ್ವಾತಂತ್ರ್ಯ, ಕಾಯಕ ಮಹತ್ವ ಭಾರತವನ್ನು ವಿನಾಶದತ್ತ ಉಪಕ್ರಮಿಸುತ್ತಿದ್ದ ಕ್ಲಿಷ್ಟ ಸನ್ನಿವೇಶದಲ್ಲಿ ಭಾರತೀಯ ಸಮಾಜಕ್ಕೆ ಹೊಸ ಸಮರ್ಥ ದಿಗ್ದರ್ಶಕ, ಬಲಾಢ್ಯ ಚಿಂತಕ, ದಾರ್ಶನಿಕ ಮಾರ್ಗದರ್ಶನದ ಅನಿವಾರ್ಯತೆಯನ್ನು ಸೃಷ್ಟಿಸಿದ ಸಂಕಷ್ಟದ ಆ ಸಮಯದಲ್ಲಿ ಉದಯಿಸಿದ ಆ ಬೆಳಕೇ ನಮ್ಮ ಶ್ರೇಷ್ಟ ವಚನ ಸಾಹಿತ್ಯ.

ವಿಜ್ಞಾನದ ವಿಧ್ವಂಸಕ ಮುಖವನ್ನು ನೋಡುತ್ತಿರುವ ಪರಿಸ್ಥಿತಿಯಲ್ಲಿ ಆಯ್ದಕ್ಕಿ ಮಾರಯ್ಯನ ಪತ್ನಿ ಲಕ್ಕಮ್ಮ–

***'ನಮಗೆ ಎಂದಿನದೇ ಸಾಕು***
***ಮತ್ತೆ ಕೊಂಡು ಹೋಗಿ ಅಲ್ಲಿಯೇ ಸುರಿ***
***ಮಾರಯ್ಯ ಪ್ರಿಯ ಅಮರೇಶ್ವರನ ಲಿಂಗ ಕೊಟ್ಟು***
***ಕಾಯಕವೇ ಸಾಕು ಮಾರಯ್ಯ'***

ಹೀಗೆ ಹೇಳುವ ಮೂಲಕ ದುರಾಸೆಯನ್ನು ಬಿಡಲು ತಿಳಿಸಿ ಆತನು ತಂದಿದ್ದ ಅಧಿಕ ಅಕ್ಕಿಯನ್ನು ಅಲ್ಲೇ ಸುರಿದು ಬರಲು ತಿಳಿಸುತ್ತಾಳೆ. ಹೆಚ್ಚಿಗೆ ಅಕ್ಕಿ ಏಕೆ ತಂದೇ? ಎಂದು ಪ್ರಶ್ನಿಸುತ್ತಾಳೆ. ಇಂಥ ದಿಟ್ಟತನ ಸಾಧ್ವಿ ನಡವಳಿಕೆ ಈಗ ಎಲ್ಲರಲ್ಲೂ ಬೆಳೆದಿದ್ದೇ ಆದರೆ ಆರ್ಥಿಕ ಸಮಾನತೆ, ಸಾಮಾಜಿಕ ಸಮಾನತೆ ಮೂಡಲು ಸಾಧ್ಯವಾಗುತ್ತದೆ.

***'ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ***
***ಭಾವ ಶುದ್ಧವಾಗಿ ಮಹಾಶರಣ ತಿಪ್ಪಿಯ ತುಪ್ಪಲಕ್ಕಿಯ ತಂದು***
***ನಿಶ್ಚೈಸಿ ಮಾಡಬೇಕು ಮಾರಯ್ಯ ಪ್ರಿಯ***
***ಅಮರೇಶ್ವರ ಲಿಂಗಕ್ಕೆ ಬೇಗ ಹೋಗು ಮಾರಯ್ಯ'***

ಎಂದು ತನ್ನ ಗಂಡ ಮಾರಯ್ಯನನ್ನು ಎಚ್ಚರಿಸಿ, ತನ್ನ ಕೆಲಸಕ್ಕೆ ತೆರಳುವಂತೆ ಮಾಡುತ್ತಾಳೆ. ದುಡಿಮೆಗೆ ಗಂಟೆಗಿಷ್ಟು, ಗಳಿಗೆಗಿಷ್ಟು ಸಂಭಾವನೆ ಪಡೆದು ಏನು ದುಡಿಯದೇ ಸೋಮಾರಿಗಳಾಗಿ ಪ್ರತಿಫಲ ನಿರೀಕ್ಷಿಸುವ ಜನರಿಗೆ ಈ ನಡೆ ದಾರಿದೀಪವಲ್ಲದೇ ಮತ್ತೇನು. ವಚನಗಳು ಕಳೆಕಿತ್ತು ಕೃಷಿಮಾಡಿ ಜೀವನೋಪಾಯಕ್ಕಾಗಿ ಬೆಳೆದ ಆಹಾರ ಧಾನ್ಯಗಳಂತೆ ಬದುಕಿಗೆ ಉತ್ತಮ ಮಾರ್ಗವನ್ನು ತೋರಿವೆ. ವಚನ ಸಾಹಿತ್ಯ ಸಂಪ್ರದಾಯಕ್ಕಿಂತ ಅನುಭವಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿ ಕರ್ನಾಟಕದಲ್ಲಿ ದೊಡ್ಡ ಕ್ರಾಂತಿಯನ್ನೇ ಮಾಡಿ ವಿಶ್ವ ದರ್ಶನದ ಸಾಲಿನಲ್ಲಿ ನಿಂತಿವೆ.

***ದಾಸಿ ಪುತ್ರನಾಗಲಿ ವೇಶ್ಯಾ ಪುತ್ರನಾಗಲಿ***
***ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ***
***ಪೂಜಿಸಿ ಪಾದೋದಕ ಪ್ರಸಾದ ಕೊಂಬುದೇ ಯೋಗ್ಯ***
***ಹೀಗಲ್ಲದೆ ಉದಾಸೀನ ಮಾಡಿ ಬಿಡುವವರಿಗೆ***
***ಪಂಚ ಮಹಾಪಾತಕ ನರಕ ಕಾಣಾ ಕೂಡಲ ಚನ್ನ ಸಂಗಮದೇವ***

ಎಂದು ಚನ್ನಬಸವೇಶ್ವರರು ಎಲ್ಲರಿಗೂ ಎಚ್ಚರಿಕೆ ನೀಡಿ ಸಮಾಜದಲ್ಲಿ ಎಲ್ಲರೂ ಸಮಾನರು ಎಂಬುದನ್ನು ದೃಢ ಪಡಿಸಲು ಸಹಪಂಕ್ತಿ ಭೋಜನ, ಕೊಳ್ಕೊಡೆ, ಬಹಳ ಮುಖ್ಯವಾಗಿ ವೃತ್ತಿ ಜಾತಿ ಯಾವುದಾದರೂ ಅವುಗಳನ್ನು ಪರಿಗಣಿಸದೇ ಅವರುಗಳ ಮನೆಯಲ್ಲಿ ಊಟ ಮಾಡಬೇಕೆಂದು ಅವರುಗಳ ಸಂಬಂಧವನ್ನು ಬೆಳೆಸಬೇಕೆಂದು ಸೂಚಿಸುತ್ತಾನೆ. 12ನೇ ಶತಮಾನದಲ್ಲಿ ಇದ್ದ ಈ ತಾರತಮ್ಯ ಇಂದಿಗೂ ಜೀವಂತವಾಗಿದ್ದು ಸಾಮಾಜಿಕ ಪಿಡುಗಾಗಿ ಕಾಣುತ್ತಿದೆ. ಅದನ್ನು ಸರಿಪಡಿಸಲು ವಚನಕಾರರು ಶ್ರಮಿಸಿದಂತೆ ಸಮಾನತೆಯ ಸಮಾಜ ನಿರ್ಮಾಣಕ್ಕಾಗಿ ಇಂದಿನ ಅವಶ್ಯಕತೆಯೂ ಆಗಿರುವುದು ವಚನ ಸಾಹಿತ್ಯದ ಪ್ರಾಮುಖ್ಯತೆಯನ್ನು ಪ್ರಸ್ತುತ ಪಡಿಸುತ್ತದೆ.

ಸಮಾಜದಲ್ಲಿ ಕಾಯಕಕ್ಕೆ ಹೆಚ್ಚಿನ ಪ್ರಾಶಸ್ತ್ಯವುಂಟು–ಕಾಯಕವೆಂದರೆ ಜೀವನೋಪಾಯಕ್ಕಾಗಿ ಕೈಗೊಂಡ ವೃತ್ತಿ. ಎಲ್ಲಾ ವೃತ್ತಿಗಳೂ ಗೌರವಯುತವಾದುದೆಂದೂ ಅವುಗಳಲ್ಲಿ ಯಾವುದೂ ಹೆಚ್ಚು ಕಡಿಮೆ ಇಲ್ಲವೆಂದೂ ವೃತ್ತಿಗಳಿಂದ ಜಾತಿಗಳು ಏರ್ಪಡುವುದಿಲ್ಲವೆಂದು ವಚನಧರ್ಮ ಹೇಳುತ್ತದೆ.

***ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ***
***ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರುವನಾದ***
***ಇದು ಕಾರಣ ಕೂಡಲಸಂಗಮದೇವ ಲಿಂಗ***
***ಸಂಗವನರಿತವನೇ ಕುಲಜನು.***

ಪ್ರತಿಯೊಬ್ಬ ಮನುಷ್ಯನಿಗೂ ತನ್ನದೇ ಆದ ಚಿಂತನೆ, ಆಲೋಚನೆ, ತಾರ್ಕಿಕತೆ, ಒಳ್ಳೆಯದು, ಕೆಟ್ಟದ್ದನ್ನು ವಿಮರ್ಶಿಸುವ, ನಿರ್ಧರಿಸುವ ಸ್ವಾತಂತ್ರ್ಯವಿರುತ್ತದೆ. ತನ್ನ ಜೀವನದ ಶಿಲ್ಪಿ ತಾನೇ ಎಂದು ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಪ್ರತಿಭಾ ಸಂಪನ್ನತೆಯನ್ನು ತಾನೇ ಎಂದು ಅರಿಯಲಾರರು.

*ಎಲ್ಲ ಎಲ್ಲವನರಿದು ಫಲವೇನಯ್ಯ*

*ತನ್ನಲ್ಲಿ ಅರಿವು ಸ್ವಯಂ ಆಗಿರಲು*

*ಅನ್ಯರ ಕೇಳಲುಂಟೇ ಚನ್ನಮಲ್ಲಿಕಾರ್ಜುನ*

ಎನ್ನುವ ಅಕ್ಕನ ಮಾತುಗಳು ಮೊದಲು ತನ್ನನ್ನು ತಾನು ಅರಿತುಕೊಳ್ಳುವ ಅಗತ್ಯವನ್ನು ಪ್ರತಿಪಾದಿಸಿದ್ದಾಳೆ. ಅಜ್ಞಾನಿಗಳ ವಿಚಾರ ಶೂನ್ಯರ ಸಹವಾಸ ಮಾಡದೇ ಸಜ್ಜನರ ಜ್ಞಾನಿಗಳ ಸಹವಾಸ ಮಾಡುವುದು ಅಮೃತದ ಸವಿಗೆ ಹೋಲಿಸಿದ್ದಾಳೆ.

*ಅರಿಯದವರೊಡನೆ ಸಂಗವ ಮಾಡಿದರೆ*

*ಕಲ್ಲ ಹೊಯ್ದು ಕಿಡಿಯ ತೆಗೆದುಕೊಂಬಂತೆ*

*ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರ*

*ಸಂಗವ ಮಾಡಿದೊಡೆ ಕರ್ಪೂರ ಗಿರಿಯನು ಉರಿಕೊಂಬಂತೆ*

ಎನ್ನುತ್ತಾ ಶರಣರ ಸಾಂಗತ್ಯ ನಮ್ಮನ್ನು ಸನ್ಮಾರ್ಗದೆಡೆಗೆ, ಔನ್ನತ್ಯದೆಡೆಗೆ ಕೊಂಡೊಯ್ಯುವ ದಿಶೆಯಲ್ಲಿ ತಿಳಿಸಿಕೊಟ್ಟಿದ್ದಾಳೆ.

ಅನಾಚಾರ, ದುರಾಚಾರ, ಭ್ರಷ್ಟಾಚಾರ, ಅತ್ಯಾಚಾರಗಳೇ ಹೆಚ್ಚಾಗಿ ಸಾಮಾಜಿಕ ಜೀವನ ಮಾರ್ಗದೆಡೆಗೆ ಸಾಗುತ್ತಿರುವ ಸಮಾಜ ವಿನಾಶದತ್ತ ಸಾಗುತ್ತಿದೆ. ವಿನಾಶವಾಗದೇ ಉಳಿಯಬೇಕಾದರೆ ವಚನಕಾರರ ನಡೆ, ನುಡಿ ಆದರ್ಶಗಳನ್ನು ಮೈಗೂಡಿಸಿಕೊಂಡು 'ಸರ್ವೇಜನೋ ಸುಖಿನೋಭವಂತು' ಎಂಬ ನುಡಿಗೆ ಅನ್ವರ್ಥವಾಗಿ ಬದುಕೋಣ ಭಾರತೀಯ ಮೌಲ್ಯಗಳನ್ನು ಉಳಿಸಿಕೊಳ್ಳೋಣ.

ದಾಸಿಮಯ್ಯ ನಮಗೆ ತಿಳಿದ ಮಟ್ಟಿಗೆ ಆದ್ಯ ವಚನಕಾರ. ಅವನ ವಚನಗಳಲ್ಲಿ ಕೆಲವು ದೇಶಿಯ ತ್ರಿಪದಿಗಳೂ, ಚೌಪದಿಗಳೂ ಮಿಶ್ರವಾಗಿ ಬಂದಿವೆ. ಇನ್ನು ಕೆಲವು ತ್ರಿಪದಿ ಚೌಪದಿಗಳನ್ನು ಹೋಲುವ ರಚನೆಗಳೂ, ತ್ರಿಪದಿಯ ಲಯವುಳ್ಳ ವಚನಗಳು, ಯಾವುದೇ ಲಯವೂ ಇಲ್ಲದ ಕೇವಲ ವಚನಗಳೂ ಅವನಲ್ಲಿ ಉಂಟು. ಇವುಗಳಲ್ಲೇ ವಚನಗಳೆಂದೇ ಹಸ್ತಪ್ರತಿಗಳಲ್ಲಿ ದೊರೆಯುತ್ತವೆ. ಅವನ ವಚನಗಳು ಗಾತ್ರದಲ್ಲಿ ತೀರ ಚಿಕ್ಕವು ಭಾಷೆಯೋ ತೀರ ಸರಳ ಈ ಗುಣಗಳೇ ದಾಸಿಮಯ್ಯನ ವಚನಗಳ ಶ್ರೇಷ್ಟತೆಗೆ ಕಾರಣಗಳಾಗಿವೆ. ಅನ್ನದಾನವೇ ಶ್ರೇಷ್ಟವೆಂದು ಹೇಳುವ ವಚನ ಕೇವಲ ನೀರಸ ಭೋದೆಯಾಗಿ ಪರಿಣಮಿಸದೇ ಹಾವು–ವಿಷ–ಗಾರುಡಿಗ ಎಂಬ ಶಬ್ದ ಚಿತ್ರವನ್ನೇ ನಮ್ಮ ಮುಂದೆ ಬಿಚ್ಚಿಟ್ಟ ಕಾವ್ಯವಾಗುತ್ತದೆ.

*ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದಡೆ*

*ವಿಷವೇರಿತ್ತಯ್ಯ ಅಪಾದಮಸ್ತಕಕ್ಕೆ*

*ಹಸಿವಿಗನ್ನವಿಕ್ಕಿ ವಿಷವನಿಳುಹ ಬಲ್ಲಡೆ*

*ವಸುದೆಯೊಳಗಾತನೇ ಗಾರುಡಿಗ ಕಾಣಾ ರಾಮನಾಥ*

ಹಸಿವಿನ ಅನುಭವವನ್ನು ವಿಷವೇರುವುದಕ್ಕೆ ಹೋಲಿಸಿರುವುದು ತೀರ ಹೊಸತು. ಅನ್ನವೊಂದೇ ಆ ವಿಷಕ್ಕೆ ಮದ್ದು ಎನ್ನುವ ಮಾತು ಅಷ್ಟೇ. ಹಸಿವಿನ ತೀವ್ರತೆಯನ್ನು ಅದರ ಅನುಭವವಿರುವವರು ಮಾತ್ರ ಬಲ್ಲರು.

*ಒಡಲುಗೊಂಡವ ಹಸಿವ*

*ಒಡಲುಗೊಂಡವ ಹುಸಿವ*

*ಬಿಡಲುಗೊಂಡವನೆಂದು ನೀನೊಮ್ಮೆ ಜಡಿದು ನುಡಿಯದಿರಾ*

*ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥ.*

ಮನುಷ್ಯನಾಗಿ ದೇಹ ದರಿಸಿದ ಮೇಲೆ ಹಸಿಯುವುದು ಹುಸಿಯುವುದು ರಕ್ತಕ್ಕೆ ಅಂಟಿ ಬಂದಥವು. ಅವುಗಳಿಂದ ಬಿಡುಗಡೆ ಸುಲಭವಲ್ಲ ಹೀಗಿರುವಾಗ ದೇವರೇ ನೀನು ನನ್ನ ಹಾಗೆ ಒಂದು ಬಾರಿ ದೇಹ ಧಾರಣೆ ಮಾಡು ಆಗ ಗೊತ್ತಾಗುತ್ತದೆ ಎಂದು ಸವಾಲು ಹಾಕುವ ರೀತಿ ಇಡೀ ವಚನಕ್ಕೆ ಕಾವನ್ನು ತರುತ್ತದೆ. ದಾಸಿಮಯ್ಯನ ವಚನಗಳು ಮಿಣುಕು ಹುಳುಗಳಿದ್ದಂತೆ. ವಚನದ ಒಂದು ಭಾಗದಲ್ಲಿ ಒಂದು ಪದದಲ್ಲಿ ಒಂದು ಉಪಮೆಯಲ್ಲಿ ಇಡೀ ವಚನಕ್ಕೆ ಬೆಲೆ ತಂದುಕೊಡುವ ಕಾರ್ಯ ಮಿನುಗು ಇರುತ್ತದೆ. ಆ ಉಕ್ತಿಯಿಂದ ಇಡೀ ವಚನ ಜ್ಯೋತಿರ್ಮಯವಾಗುತ್ತದೆ.

*ಬರುಸಟೆಗನ ಭಕ್ತಿ ದಿಟವೆಂದು ನಂಬಲುಬೇಡ*

*ಮಠದೊಳಗಣ ಬೆಕ್ಕು ಇಲಿಯ ಕಂಡು*

*ಪುಟನೆಗೆದಂತಾಯ್ತು ಕಾಣಾ ರಾಮನಾಥ.*

ಡಾಂಭಿಕನ ಭಕ್ತಿ ಬರಿಯ ವೇಷದ್ದು, ಕ್ಷಣಿಕದ್ದು ಎಂಬುದನ್ನು ಹೇಳಲು ಮಠದ ಬೆಕ್ಕಿನ ಸಾಮ್ಯವನ್ನು ತೆಗೆದುಕೊಂಡಿರುವುದು ಎಷ್ಟು ಉಚಿತವಾಗಿದೆ. ಆದಷ್ಟು ದಷ್ಟ–ಪುಷ್ಟವಾಗಿ ಬೆಳೆದಿರುವ ಅದರ ಸೋಗು ಇಲಿಯನ್ನು ಕಂಡ ತಕ್ಷಣ ಕಳಚಿ ಬೀಳುತ್ತದೆ. ಮಠದ ಬೆಕ್ಕು ಮಠದ ಅಧಿಪತಿಗಳಿಗೆ ಸಂಕೇತವಾಗಿ ನಿಲ್ಲುವಂತೆ ಮಾಡಿರುವ ತಂತ್ರ ಅರ್ಥಪೂರ್ಣವಾದುದು.

*ಮೊಲೆ ಮುಡಿ ಬಂದರೆ ಹೆಣ್ಣೆಂಬರು*

*ಗಡ್ಡ ಮೀಸೆ ಬಂದರೆ ಗಂಡೆಂಬರು*

*ನಡುವೆ ಸುಳಿವಾತ್ಮನು*

*ಗಂಡು ಅಲ್ಲ ಹೆಣ್ಣು ಅಲ್ಲ ಕಾಣಾ ರಾಮನಾಥ.*

ಪ್ರಸ್ತುತ ವಚನದಲ್ಲಿ ಗಂಡು ಹೆಣ್ಣುಗಳ ಅಸಮಾನತೆಯ ಬಗ್ಗೆ ಜೇಡರ ದಾಸಿಮಯ್ಯ ತನ್ನ ಕಾಲದ ನಂಬಿಕೆಯನ್ನು ನಿರ್ಧಾಕ್ಷಿಣ್ಯವಾಗಿ ಖಂಡಿಸಿದ್ದಾನೆ. ವಿವರಣೆಯ ಅಗತ್ಯವಿಲ್ಲ ಎನ್ನುವಷ್ಟು ಸರಳವಾಗಿದೆ. ಹೇಳುವ ರೀತಿಯಲ್ಲಿ ಗಡಸುತನವಿದೆ. ಇದನ್ನು ಅವನ ನಂತರ ಕೊನೆಯ ಪಕ್ಷ ಮೂವರಾದರೂ (ಅಂಬಿಗರ ಚೌಡಯ್ಯ, ಸತ್ಯಕ್ಕ, ಗೊಗ್ಗವ್ವೆ) ಅಲ್ಲಿ ಸ್ವಲ್ಪ ವ್ಯತ್ಯಾಸಗಳೊಡನೆ ಅನುಸರಿಸಿರುವುದು ಅದು ತೀವ್ರ ಪರಿಣಾಮಕಾರಿಯಾಗಿದ್ದು ಕೃತಿಗಳಲ್ಲೊಂದು.

*ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯ*

*ಎನ್ನುವನು ಕಾಯಯ್ಯಾ, ಕಾಯಯ್ಯಾ*

*ಹುರುಳಿಲ್ಲ ! ಹುರುಳಿಲ್ಲ !*

*ಕೂಡಲಸಂಗಮದೇವ ಶಿವದೋ ಶಿವದೋ*

ಸಾಮಾನ್ಯ ವಚನವೂ ಕೂಡ ಅವನು ಈ ಭವದಲ್ಲಿ ಅನುಭವಿಸಿದ ಬೇಗೆಯನ್ನು ಓದುಗರಿಗೆ ತಿಳಿಸುತ್ತದೆ. ಈ ವಚನದಲ್ಲಿ ಅಲಂಕಾರವೂ ಇಲ್ಲ. ಆದ್ದರಿಂದಲೇ ಈ ವಚನವನ್ನು ಆರಿಸಿಕೊಂಡಿದ್ದು. ಆದರೂ ಅದರ ಸರಳತೆಯೇ ಅಭಿವ್ಯಕ್ತಿಯ ದೃಷ್ಟಿಯಿಂದ ಶ್ರೇಷ್ಠವಾಗಿದೆ. ಅಯ್ಯಾ, ಕಾಯಯ್ಯ, ಹುರುಳಿಲ್ಲ, ಶಿವದೋ ಈ ಪದಗಳ ಬರಿಯ ಪುನರುಚ್ಚಾರಣೆಯೇ ಬಸವಣ್ಣನ ಮನಸ್ಸಿನ ಬೇಗೆಯನ್ನು ತಟ್ಟುತ್ತದೆ. ಅವನ ಬಿಸಿ ನಿಟ್ಟುಸುರು ನಮಗೆ ತಾಗುತ್ತದೆಯೋ ಎನ್ನುವಷ್ಟು ಅವನ ಅನುಭವವನ್ನು ಸಜೀವವಾಗಿ ನಮ್ಮ ಮುಂದೆ ನಿಲ್ಲಿಸುತ್ತದೆ.

*ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ*

*ವಿಚಾರಿಸಿದಡೇನೂ ಹುರುಳಿಲ್ಲವಯ್ಯ*

*ಪ್ರಪಂಚಿನ ಡಂಬಿನಲ್ಲಿ ಎನ್ನನೊಂದು ರೂಹ ಮಾಡಿ*

*ನೀವಿರಿಸಿದಿರಿ ಕೂಡಲಸಂಗಮದೇವ.*

ಈ ವಚನದಲ್ಲಿ ಲೋಕದ ಸಂಗತಿಯೊಂದರ ವೈಚಿತ್ರ್ಯವನ್ನು ಬಳಸಿಕೊಂಡು ಬಸವಣ್ಣ ತನ್ನ ಮನಸ್ಸಿನ ಸ್ಥಿತಿಯನ್ನು ವಿವರಿಸುತ್ತಾನೆ. ಅತ್ತಿಯ ಹಣ್ಣು ನೋಡಲು ಹೊರಗೆ ಚೆಂದ ಒಳಗೆ ಬರಿಯ ಹುಳು ಈ ಪ್ರಪಂಚವೆಂಬ ಮೋಸದಲ್ಲಿ ತನ್ನನ್ನು ಒಂದು ಮೋಸದ ಆಕಾರವೆಂದೂ ಕರೆದುಕೊಂಡು ಬಸವಣ್ಣ ತನ್ನನ್ನು ತಾನು ಟೀಕಿಸಿಕೊಳ್ಳುತ್ತಾನೆ. ಅತ್ತಿಯ ಹಣ್ಣಿನ ಪ್ರತಿಮೆ ಜನಸಾಮಾನ್ಯರ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ. ವಚನದಲ್ಲಿ ಬಂದಿರುವ ಆತ್ಮ ವಿಮರ್ಶೆ ಬಸವಣ್ಣನಿಗೆ ಸ್ವಂತಕ್ಕೆ ಧೈರ್ಯವನ್ನು ತಂದು ಕೊಟ್ಟರೆ ಜನರಿಗೆ ಅವನಲ್ಲಿ ವಿಶ್ವಾಸವನ್ನು ಮೂಡಿಸುತ್ತದೆ.

*ಹಾವು ತಿಂದವರ ನುಡಿಸಬಹುದು*

*ಗರ ಹೊಡೆದವರ ನುಡಿಸಬಹುದು*

*ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯ*

*ಬಡತನವೆಂಬ ಮಂತ್ರವಾದಿ ಹೊಗಲು*

*ಒಡನೆ ನುಡಿವರು ಕೂಡಲಸಂಗಮದೇವ*

ಶ್ರೀಮಂತರ ಅಹಂಕಾರವನ್ನು ಅದು ಹೇಳುತ್ತದೆ. ಹಾವು ಕಚ್ಚಿದವರನ್ನಾದರೂ ಮಾತನಾಡಿಸಬಹುದು. ಗರ ಹೊಡೆದವರನ್ನಾದರೂ ಮಾತನಾಡಿಸಬಹುದು. ಆದರೆ ಸಿರಿಗರ(ಐಶ್ವರ್ಯ)ವೆಂಬ ಗ್ರಹ ಹೊಡೆದವರನ್ನು ಮಾತನಾಡಿಸಲು ಯಾರಿಂದಲೂ ಸಾಧ್ಯವಿಲ್ಲ. ಅದಕ್ಕೆ ಬಡತನವೆನ್ನುವ ಮಂತ್ರವಾದಿಯೇ ಬರಬೇಕು. ಗರಹೊಡೆಯುವುದು ಮಂತ್ರವಾದಿ ಬಿಡಿಸುವುದು ಗೊತ್ತಿರುವ ಸಂಗತಿಯೇ ಹಾಗಾಗಿ ಶ್ರೀಮಂತಿಕೆಯ

ವಿಡಂಬನೆಗಾಗಿ ಬಳಸಿಕೊಂಡಿರುವ ರೀತಿ ಅಪೂರ್ವ ಸಾಮಾಜಿಕ ವಿಮರ್ಶೆ ಅಂತಹ ಅಪ್ಪಟ ಮನುಷ್ಯ ಬಾಯಲ್ಲಿ ಬರುವುದು.

***ನುಡಿದರೆ ಮುತ್ತಿನ ಹಾರದಂತಿರಬೇಕು***

***ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು***

***ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು***

ಆಡಿದ ನುಡಿ ಹೇಗಿರಬೇಕು ಎಂಬುದನ್ನು ಬಸವಣ್ಣ ಇಲ್ಲಿ ಮೂರು ಪ್ರತಿಮೆಗಳ ಮೂಲಕ ಹೇಳುತ್ತಾನೆ. ಹಾರದಲ್ಲಿ ಮಣಿಗಳು ಜೋಡಣೆಗೊಂಡಿರುವಂತೆ ಪದಗಳು ಇರಬೇಕು. ರತ್ನವು ಸ್ವಯಂ ಜ್ಯೋತಿಯನ್ನು ಹೊಂದಿರುತ್ತದೆ. ಹಾಗೆಯೇ ಮಾತುಗಳಿಗೂ ಅರ್ಥಉಂಟು. ಆದರೆ ಆ ರತ್ನವನ್ನು ಹೇಗೆ ಕುಶಲಿ ಕೆತ್ತುತ್ತಾನೋ ಹಾಗೆ ಅದರಿಂದ ದೀಪ್ತಿ ಹೊಮ್ಮುತ್ತದೆ. ಮಾತುಗಳಿಂದ ಸರಿಯಾದ ಅರ್ಥವನ್ನು ಹೊಮ್ಮಿಸಲು ಕೌಶಲಬೇಕು. ಹಾರದ ಚಿತ್ರವು ಮಾತುಗಳ ಬಾಹ್ಯ ಜೋಡಣೆಯನ್ನು ಅರ್ಥಾತ್ ಶಬ್ದಾಲಂಕಾರವನ್ನು ಹೇಳಿದರೆ, 'ಮಾಣಿಕ್ಯದ ದೀಪ್ತಿಯ' ಚಿತ್ರವು ಮಾತುಗಳಿಗೆ ಇರುವ ಅರ್ಥ ಛಾಯೆಗಳನ್ನು ಸೂಚಿಸುತ್ತದೆ. ಒಂದೇ ರತ್ನ ಬೇರೆ ಬೇರೆ ಕೋನಗಳಲ್ಲಿ ಬೇರೆ ಬೇರೆ ಬೆಳಕನ್ನು ಹೊಮ್ಮಿಸುವಂತೆ ಒಂದು ಮಾತು ಬೇರೆ ಬೇರೆ ಪರಿಸರದಲ್ಲಿ ಬೇರೆ ವಿವಿಧ ಅರ್ಥಛಾಯೆಗಳನ್ನು ಪಡೆದಿರಬಹುದು. ಮೂರನೆಯ 'ಸ್ಫಟಿಕದ ಸಲಾಕೆ'ಯ ಚಿತ್ರವು ಭಾಷೆಯ ಒಳಗಿನ ಸ್ತರಕ್ಕೆ ಕರೆದೊಯ್ಯುತ್ತದೆ ಪೂರ್ಣ ವಿಗ್ರಹವನ್ನು ಕೆತ್ತಿದ ಶಿಲ್ಪಿಗಳು ಕೊನೆಯಲ್ಲಿ ಅದರ ಕಣ್ಣನ್ನು ಬಿಡಿಸಲು ಸ್ಫಟಿಕದ ಶಲಾಕೆಯನ್ನು ಬಳಸುತ್ತಿದ್ದರು. ಕಣ್ಣು ಪೂರ್ಣವಾಗದೇ ಇಡೀ ಪ್ರತಿಮೆ ನಿರ್ಜೀವವಾಗುತ್ತದೆ. ಕಣ್ಣು ತೆರೆದ ವಿಗ್ರಹ ಸಜೀವವಾಗುತ್ತದೆ. ಸ್ಫಟಿಕದ ಸಲಾಕೆ ಇದೇ ಮಾತಿಗೆ ರಚನೆಗೆ ಅರ್ಥವಂತಿಕೆಯನ್ನು ತಂದು ಕೊಡುವ ಕೇಂದ್ರ ಭಾವದ ಸಂಕೇತ.

ಅಲ್ಲಮ ತನ್ನ ಯೋಗಿಕ ಪರಿವೇಷದಿಂದಾಗಿ ನಮಗೆ ದೂರ ನಿಲ್ಲುವಂತೆ ಭಾಸವಾಗುತ್ತದೆ. ಅವನ ವಚನಗಳ ಬಗ್ಗೆ ಬರೆಯುವವರಲ್ಲಿ ಈ ಅಳುಕನ್ನು ಅನುಭವಿಸುವುದಕ್ಕೆ ನಮಗೆ ಪರಿಚಿತವಲ್ಲದ ಅವನ ಮಾನಸಿಕ ಜಗತ್ತು ಕಾರಣ. ಆ ವ್ಯಕ್ತಿ ಹೇಗೊ ಅವನ ವಚನಗಳು ಏನೋ ಗೂಢ ರಹಸ್ಯ, ಘನ ಎನಿಸಿಬಿಡುತ್ತವೆ. ಅವನಲ್ಲಿ ಮಾನಸಿಕ ತುಮುಲದ ವಚನಗಳು ಕಡಿಮೆ. ಇದಕ್ಕೆ ಕಾರಣ ಅವನು ಮಾನಸಿಕ ಅಸ್ವಸ್ಥ್ಯವನ್ನು ಕಳೆದುಕೊಂಡು ಮುಕ್ತನಾದ ಮೇಲೆ ಬರೆದಿರುವ ವಚನಗಳೇ ಹೆಚ್ಚು. ಆದ್ದರಿಂದ ಅಲ್ಲಮನ ವಚನಗಳಲ್ಲಿ 'ಅಲ್ಲಮತ್ವ'ಕ್ಕಿಂತ 'ಪ್ರಭುತ್ವ ಗುಣ' ಜಾಸ್ತಿಯಿರುವಂತೆ ಭಾಸವಾಗುತ್ತದೆ. ಅವನ ಕಡಿಮೆ ಸಂಖ್ಯೆಯಲ್ಲಿರುವ ಸರಳ ವಚನಗಳನ್ನೇ ನೋಡುವುದಾದರೆ

***ಎತ್ತಣ ಮಾಮರ ! ಎತ್ತಣ ಕೋಗಿಲೆ !***

***ಎತ್ತಣಿಂದೆತ್ತಣ ಸಂಬಂಧವಯ್ಯಾ !***

***ಬೆಟ್ಟದ ನೆಲ್ಲಿ ಕಾಯಿ, ಸಮುದ್ರದೊಳಗಣ ಉಪ್ಪು***

ಇಲ್ಲಿಯ ವಿಸ್ಮಯ ಎದ್ದು ಕಾಣುವಂಥದ್ದೇ ತೀರ ಸಾಮಾನ್ಯವಾದ ತಾನು ಎಲ್ಲಿ ? ತಾನು ಕನಸಿನಲ್ಲಿಯೂ ಪಡೆಯಲು ಸಾಧ್ಯವಾಗದ ಇಷ್ಟಲಿಂಗದ ಪ್ರಾಪ್ತಿ ಎಲ್ಲಿ ? ಎರಡಕ್ಕೂ ಅರ್ಥಾತ್ ತಾರ್ಕಿಕ ಸಂಬಂಧವಿಲ್ಲ. ಆದರೆ ಇದು ಮನುಷ್ಯ ನಿರ್ಮಿತ ಕೃತಕ, ಧಾರ್ಮಿಕ ವ್ಯವಸ್ಥೆಯಲ್ಲಿಯಂತೂ ಅಸಂಭವ ಅತಾರ್ಕಿಕ. ನಿರ್ಜೀವದ ಮಾವಿನ ಮರವನ್ನು ಹುಡುಕಿಕೊಂಡು ಕೋಗಿಲೆ ಬರುತ್ತದೆ. ಎರಡಕ್ಕೂ ಸಂಬಂಧವಿಲ್ಲ ಆದರೆ ಸಂಬಂಧ ಉಂಟಾಗಿ ಕೋಗಿಲೆಯಿಂದ ಮಾವಿನ ಮರ ಗೌರವವನ್ನು ಪಡೆದುಕೊಳ್ಳುತ್ತದೆ ಮಾವಿನ ಮರದ ಚಿಗುರನ್ನು ಹೀರಿ ಹಕ್ಕಿ ತನ್ನ ಕೊರಳನ್ನು ಪಡೆದುಕೊಳ್ಳುತ್ತದೆ.

***ಕೊಟ್ಟ ಕುದುರೆಯನೇರಲರಿಯದೆ***

***ಮತ್ತೊಂದು ಕುದುರೆಯ ಬಯಸುವವರು ವೀರರೂ ಅಲ್ಲ ಧೀರರೂ ಅಲ್ಲ.***

ಕೊಟ್ಟ ಕುದುರೆಯನ್ನು ಹತ್ತುವ ಶಕ್ತಿಯಿಲ್ಲದೆ ಬೇರೊಂದು ಕುದುರೆ ಹುಡುಕಿಕೊಂಡು ಹೋಗುವವರನ್ನು ವೀರರೆಂದು ಕರೆಯಲು ಸಾಧ್ಯವಿಲ್ಲ. ಅವರು ಜೀನು ಹೊತ್ತುಕೊಂಡು ಜೀವನವೆಲ್ಲ ತಾವು ಹತ್ತಬೇಕೆಂದಿರುವ ಕುದುರೆಯನ್ನು ಹುಡುಕಿಕೊಂಡೇ ತಿರುಗುತ್ತಿರುತ್ತಾರೆ. ಅವರಿಗೆ ಬೇಕಾದ ಕುದುರೆ ಈ ಲೋಕದಲ್ಲಿ ಇಲ್ಲ. ಏಕೆಂದರೆ ಅವರಿಗೆ ಮೂಲತಃ ಕುದುರೆಯನ್ನು ಹತ್ತುವ ಸಾಮರ್ಥ್ಯವೇ ಇಲ್ಲ. ಇಲ್ಲಿ ಪಲಾಯನವಾದದ ಎಂತಹ ವಿಡಂಬನೆ. ಕುದುರೆ – ಹಲ್ಲಣ – ಸವಾರ ಈ ಪ್ರತಿಮೆಯಲ್ಲಿ ಅಲ್ಲಮ ತನ್ನ ಆಲೋಚನೆಯನ್ನು ಹುದುಗಿಸಿರುವ ರೀತಿ ಅವನಿಗೆ ಮಾತ್ರ ಸಾಧ್ಯ.

***ಬೆಟ್ಟಕ್ಕೆ ಚಳಿಯಾದರೆ ಏನು ಹೊದುವಿಸರಯ್ಯ ?***

***ಬಯಲು ಬತ್ತಲೆಯಿದ್ದರೆ ಏನನುಡಿಸುವಿರಯ್ಯ ?***

***ಭಕ್ತನು ಭವಿಯಾದಡೆ ಏನನುಪಮಿಸುವೆನಯ್ಯ ಗುಹೇಶ್ವರ.***

ಮೊದಲ ಎರಡು ಉಕ್ತಿ ವೈಶಿಷ್ಟ್ಯದಿಂದಾಗಿ ಚಮತ್ಕಾರವನ್ನು ಸಾಧಿಸುತ್ತದೆ. ಆದರೆ ಭಕ್ತನಾಗಿದ್ದವನು ಮತ್ತೆ ಹಿಂದಿನಂತೆಯೇ ಭವಿಯಾದರೆ ಅದರ ಬಗ್ಗೆ ಏನು ಹೇಳಲಿ ಎಂಬ ಕೊನೆಯ ಮಾತಿಗೂ ಮೊದಲ ಎರಡು ಚಿತ್ರಗಳಿಗೂ ಸಂಬಂಧ ಕಲ್ಪನೆಯಾಗುವುದಿಲ್ಲ.

ಅಲ್ಲಮನಲ್ಲಿ ಸಾಮಾಜಿಕ ವಿಡಂಬನೆ ಸಾಕಷ್ಟು ಪ್ರಮಾಣದಲ್ಲಿ ಬಂದಿದೆ. ದೇಹದ ಮೇಲೆ ಲಿಂಗ ಧರಿಸಿದ ತಕ್ಷಣ ಭಕ್ತನಾಗಿ ಬಿಡುತ್ತಾನೆಯೇ? ಮೆಳೆಯ ಮೇಲೆ ಕಲ್ಲು ಇದ್ದರೆ ಆ ಮೆಳೆ ಭಕ್ತನಾದಂತೆಯೇ? ಎಂದು ಹಾಸ್ಯ ಮಾಡುತ್ತಾನೆ. ಕೈಯಲ್ಲಿ ಕರಸ್ಥಲ, ಮನದಲ್ಲಿ ಪರಸ್ಥಲ, ತನುವೆಲ್ಲಾ ಹುಸಿಯ ಸ್ಥಲ ಎಂಬಲ್ಲಿ ಡಂಬಾಚಾರದ ಭಕ್ತಿಯನ್ನು ಬೀದಿಗೆಳೆದಿದ್ದಾನೆ.

ಅಲ್ಲಮ ಬೆಡಗಿನ ವಚನಗಳಲ್ಲಿ ಸಿದ್ದ ಸಂಕೇತಗಳು ಬಳಕೆಯಾಗುತ್ತವೆ. ಬೆಡಗು ಎಂದರೆ ಚೆಲುವು, ಚಮತ್ಕಾರ, ಸರಳವಲ್ಲದ್ದು ಎಂದರ್ಥ. ಯಾವುದನ್ನು ಹಲವಾರು ಮಾತುಗಳಲ್ಲಿ ಬಿಚ್ಚಿ ಹೇಳಬಹುದಿತ್ತೋ ಅದನ್ನು ಕಡಿಮೆ ಮಾತುಗಳಲ್ಲಿ ಮುಚ್ಚಿ ಹೇಳುವುದು ಬೆಡಗಿನ ವಚನಗಳ ವೈಶಿಷ್ಟ್ಯ.

***ಕೆಂಡದ ಗಿರಿಯ ಮೇಲೊಂದು ಅರಗಿನ ಕಂಭವಿದ್ದಿತ್ತು ನೋಡಯ್ಯ***
***ಅರಗಿನ ಕಂಭದ ಮೇಲೆ ಒಂದು ಹಂಸೆಯಿದ್ದಿತ್ತು***
***ಕಂಭ ಬೆಂದಿತ್ತು, ಹಂಸ ಹಾರಿತ್ತು ಗುಹೇಶ್ವರ.***

'ಶಿವೋಹಂ' ಎಂಬ ಜ್ಞಾನವೇ ಕೆಂಡದ ಗಿರಿ. ಅರಗಿನ ಕಂಬವು ಶರಣನ 'ನಾನು' ಎಂಬ ಭಾವದ ಸಂಕೇತ. ಅದರ ತುದಿಯಲ್ಲಿರುವ 'ಹಂಸ' ಪರಮಾತ್ಮ ತತ್ವದ ಸಂಕೇತ. ಜ್ಞಾನಾಗ್ನಿಯಲ್ಲಿ 'ನಾನು ಬೇರೆ ಶಿವ ಬೇರೆ' ಎಂಬ ಭಾವ ಅಳಿದ ತಕ್ಷಣ ಜೀವಾತ್ಮವು ತಾನು ವಾಸ್ತವವಾಗಿ ಪರಮಾತ್ಮನೇ ಎಂದು ತಿಳಿಯುತ್ತದೆ.

ಅಕ್ಕಮಹಾದೇವಿ ಎಂದು ಖ್ಯಾತಳಾಗಿರುವ ಮಹಾದೇವಿಯಕ್ಕ ವಚನ ಸಾಹಿತ್ಯಾಕಾಶದ ಉಜ್ವಲ ನಕ್ಷತ್ರ, ಶ್ರೇಷ್ಠ ಅನುಭಾವಿ. ತನ್ನ ಆದರ್ಶಕ್ಕಾಗಿ ಸಾಮಾಜಿಕ ವ್ಯವಸ್ಥೆ ಮತ್ತು ರಾಜಪ್ರಭುತ್ವಗಳೆರಡನ್ನು ಏಕಕಾಲಕ್ಕೆ ಧಿಕ್ಕರಿಸಿ ನಿಂತವಳು, ಜೀವನವನ್ನು ಹೋರಾಟದಲ್ಲೇ ಕಳೆದವಳು. ವಚನ ಸಾಹಿತ್ಯಕ್ಕೆ ತನ್ನದೇ ಆದ ಕೊಡುಗೆಗಳನ್ನು ಕೊಟ್ಟು ಕನ್ನಡದ ಪ್ರಥಮ ಶ್ರೇಷ್ಠ ಕವಿಯತ್ರಿಯಾದವಳು. ಹೆಣ್ತನಕ್ಕೆ ಒಂದು ಗೌರವವನ್ನು ತಂದುಕೊಟ್ಟ ಬಸವ, ಅಲ್ಲಮ ಮೊದಲಾದವರಿಂದ ಸನ್ಮಾನಿತಳಾದವಳು. ಕನ್ನಡ ಸಾಹಿತ್ಯ ಕೂಡ ಅವಳಿಂದ ನಿಜವಾಗಿಯೂ ಶ್ರೀಮಂತವಾಯಿತು.

ಆಕೆ ಭಕ್ತೆ, ಶಿವಶರಣೆ, ಅನುಭಾವಿ ನಿಜ. ಆದರೆ ಒಬ್ಬ ಸಾಮಾನ್ಯ ಹೆಣ್ಣು ಮಗಳು ತಾನು ಬಲವಂತದಿಂದ ಕೈ ಹಿಡಿದ ಗಂಡನೊಬ್ಬನನ್ನು, ಅದರಲ್ಲೂ ರಾಜನೊಬ್ಬನನ್ನು ತಿರಸ್ಕರಿಸಿದ್ದು ನಮಗೆ ಆಶ್ಚರ್ಯವಾಗಿ ಕಾಣುತ್ತದೆ. ವಿವಾಹದ ನಿಯಮಗಳು ಹಿಂದೂ ಸಂಪ್ರದಾಯಕ ಸಮಾಜದಲ್ಲಿ ತೀರ ಕಠಿಣ. ಗಂಡನನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಹೆಣ್ಣಿಗಿಲ್ಲ. ಮದುವೆಯಾದ ಮೇಲಂತೂ ಇಷ್ಟವಿರಲಿ ಇಲ್ಲದಿರಲಿ, ಹೆಣ್ಣು ಗಂಡಿನ ಅಧೀನದಲ್ಲಿ ಅವನ ವಸ್ತುವಾಗಿ ಇರಬೇಕು. ಇದು ಹಿಂದೂ ಸಮಾಜ ಒಪ್ಪಿಕೊಂಡು ಬಂದಿರುವ ನೀತಿ ಸಂಹಿತೆ. ಆದರೆ ಎಂಟುನೂರು ವರ್ಷಗಳ ಹಿಂದೆ ಅಕ್ಕ ಏಕಾಂಗಿಯಾಗಿ ಅದನ್ನು ಪ್ರತಿಭಟಿಸಿ ನಿಂತು ಯಶಸ್ವಿಯಾದುದು ಸಾಮಾನ್ಯ ಸಂಗತಿಯೇನು ಅಲ್ಲ.

***ಅಕ್ಕ ಕೇಳವ್ವ ಅಕ್ಕಯ್ಯ, ನಾನೊಂದು ಕನಸ ಕಂಡೆ***
***ಅಕ್ಕಿಯಡಕೆ ಓಲೆ ತೆಂಗಿನಕಾಯ ಕಂಡೆ***
***ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು***
***ಬಿಕ್ಷಕೆ ಮನೆಗೆ ಬಂದುದ ಕಂಡೆನವ್ವ.***

ಯೌವ್ವನಕ್ಕೆ ಅಡಿಯಿಡುತ್ತಿರುವ ಅಕ್ಕ ಕಂಡ ಕನಸು ಸಹಜವಾಗಿಯೇ ಮದುವೆಯ ಕನಸು. ವಿವಾಹದ ಮಂಗಳ ದ್ರವ್ಯಗಳೆಲ್ಲ ಅಲ್ಲಿ ಉಂಟು, ಇನ್ನು ಗಂಡು? ಶಿವನನ್ನು ಸನ್ಯಾಸಿಯ ರೂಪದಲ್ಲಲ್ಲದೆ ಬೇರೆ ರೀತಿಯಲ್ಲಿ ಚಿತ್ರಿಸಿಕೊಳ್ಳಲು ಸಾಧ್ಯವಿಲ್ಲ. ಆದರೂ ಇದ್ದುದರಲ್ಲಿ ಅಕ್ಕ ಅವನನ್ನು ಸ್ಫುರದ್ರೂಪಿಯಾಗಿ ಕಲ್ಪಿಸಿಕೊಂಡಿದ್ದಾಳೆ. ಅವನಿಗೆ ಚಿಕ್ಕ ಚಿಕ್ಕ ಜಡೆಗಳುಂಟು. ಹಲ್ಲನ್ನು ಶುಭ್ರವಾಗಿ ಇಟ್ಟುಕೊಂಡಿದ್ದಾನೆ. ಚಿಕ್ಕ ವಯಸ್ಸಿನ ಆ ಗೊರವನನ್ನು ಅವಳು ಚೆನ್ನಮಲ್ಲಿಕಾರ್ಜುನನೆಂದು ಕಂಡು ಕಣ್ಣು ತೆರೆದಳಂತೆ.

***ಸಾವಿಲ್ಲದ ಕೇಡಿಲ್ಲದ ಚೆಲುವಂಗಾನೊಲಿದೆನವ್ವ***

***ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ***

***ಚೆಲುವಂಗಾನೊಲಿದೆನವ್ವ***

ಬಹುಶಃ ಕೌಶಿಕನನ್ನು ಕೈ ಹಿಡಿಯಲು ಒತ್ತಾಯ ಬಂದಾಗ ಆಡಿರಬಹುದಾದ ಈ ವಚನ ಲೋಕದ ಚೆಲುವರನ್ನು, ಆ ನಿಸ್ಸೀಮ ಚೆಲುವನನ್ನು ತುಲನೆ ಮಾಡುತ್ತದೆ. ತಾನು ಒಲಿದ ಆ ಸುಂದರ ಪುರುಷನಿಗೆ ಸಾವಿಲ್ಲ, ಕೇಡಿಲ್ಲ ಎಂದು ಮುಂತಾಗಿ ಹೇಳಿರುವಲ್ಲಿ ಇಹದ ಬಗ್ಗೆ ಅವಳಿಗಿರುವ ತಿರಸ್ಕಾರ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈ ಲೋಕದ ಗಂಡಸರನ್ನು ತೆಗೆದುಕೊಂಡು ಹೋಗಿ ಒಲೆಯಲ್ಲಿ ಹಾಕು ಎಂಬಲ್ಲಿ ಆ ತಿರಸ್ಕಾರ ಪೂರ್ಣವಾಗುತ್ತದೆ. ಅದನ್ನು ವ್ಯಕ್ತ ಪಡಿಸಿರುವ ರೀತಿಯೂ ಅಷ್ಟೇ ಸಹಜವಾಗಿದೆ.

***ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವ !***

***ಏರಿಲ್ಲದ ಗಾಯದಲ್ಲಿ ನೊಂದೆನವ್ವ***

***ಸುಖವಿಲ್ಲದ ಧಾವತಿಗೊಂಡೆನವ್ವ !***

ಬೆಂಕಿ ಇಲ್ಲದ ಬೇಗೆ, ಗಾಯವಿಲ್ಲದ ನೋವು ಇವು ಅವಳ ಅಂತರಂಗದ ವೇದನೆಯನ್ನು ತೀರ ಸಹಜವಾಗಿ ಧ್ವನಿಸುತ್ತದೆ. ಅಕ್ಕ ಕಷ್ಟವಾಗಿರುವ ಪದಗಳನ್ನು ಬಳಸಿಲ್ಲ. ಅವಳ ತೀವ್ರಭಾವನೆಯೇ ಅವಳ ವಚನಗಳಿಗೆ ಕಾವ್ಯತ್ವವನ್ನು ತಂದುಕೊಡುತ್ತದೆ.

ಸಿದ್ದರಾಮ 12ನೇ ಶತಮಾನದ ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳಲ್ಲೊಬ್ಬನಾಗಿದ್ದು, ಅವನ ಬೆಂಬಲ ಸಿಕ್ಕ ವೀರಶೈವ ಆಂದೋಲನ ಇನ್ನು ಹೆಚ್ಚು ವ್ಯಾಪಕವಾಗಿ ಪ್ರಚಾರವಾಗಲು ಸಹಾಯವಾಯಿತು. ಸಿದ್ದರಾಮ ಬಹುಸಂಖ್ಯೆಯ ವಚನಗಳನ್ನು ಬರೆದಿದ್ದಾನೆ. ತಾನು ಅರವತ್ತೆಂಟು ಸಾವಿರ ವಚನಗಳನ್ನು ಹಾಡಿ ಸೋತಿರುವುದಾಗಿ ಹೇಳಿಕೊಂಡಿದ್ದರೂ ಈಗ ಸಿಕ್ಕಿರುವುದು 1378 ಮಾತ್ರ. ಸಿಕ್ಕಿರುವ ವಚನಗಳನ್ನು ನೋಡಿದರೂ ಅವನು ಪಾಂಡಿತ್ಯಕ್ಕಿಂತ ಅನುಭಾವಕ್ಕೆ, ಹೃದಯ ಶುದ್ಧಿಗೆ ಸರ್ವಜೀವ ಅನುಕಂಪೆಗೆ ಹೆಚ್ಚಿನ ಮಹತ್ವ ಕೊಟ್ಟಿರುವುದು ಗೊತ್ತಾಗುತ್ತದೆ.

***ವಚಿಸಿ ಅನುಭಾವಿಯಾಗದವ ಪಿಶಾಚಿಯಯ್ಯಾ***

***ವಚಿಸಿ ಅನುಭಾವಿಯಾದವ ಪಂಡಿತನಯ್ಯಾ***

***ವಿದ್ಯೆಯೆಂಬುದು ಅಭ್ಯಾಸಿಕನ ವಶ***

***ಅವಿದ್ಯೆಯೆಂಬುದು ಸರ್ವರಲ್ಲಿ ವಶ***

***ವಿದ್ಯಾವಿದ್ಯೆಯನರಿತು ಜಗದ್ವೇದ್ಯನಾಗಬಲ್ಲಡೆ***

***ಮಹಾಪಂಡಿತ ನೋಡಾ ಕಪಿಲಸಿದ್ಧ ಚನ್ನಮಲ್ಲಿಕಾರ್ಜುನ***

ಪುಸ್ತಕದ ವಿದ್ಯೆಯ ಬಗ್ಗೆ ಅವನಿಗಿರುವ ತಿರಸ್ಕಾರ 'ಅನುಭವವೆಂಬುದು ಅನುಭಾವಿಕಗಲ್ಲದೆ ಹೊತ್ತಗೆಯಲ್ಲಿಲ್ಲ ನೋಡಾ' ಎಂಬ ಮಾತಿನಲ್ಲಿಯೂ ವ್ಯಕ್ತವಾಗಿದೆ. ಇದು ವಚನಕಾರರ ಧೋರಣೆಯು ಹೌದು ನುಡಿಗಿಂತ ನಡೆಗೆ ಮಾತಿಗಿಂತ ಅನುಭವಕ್ಕೆ ಪ್ರಾಧಾನ್ಯತೆ ಕೊಟ್ಟರು ವಚನಕಾರರು.

'ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು ಅನುಗೊಂಬನಿತು ಕಾಯಕ ನಡೆಯಂತಿರಬೇಕು' (ರಾಘವಾಂಕ) ಇದು ಸಿದ್ಧರಾಮನ ಜೀವನದ ಸೂತ್ರ. ಸಾಮಾಜಿಕ ಕಾರ್ಯಗಳಲ್ಲೇ ಅವನು ತನ್ನ ಜೀವನವನ್ನು ಕಳೆದು ತಾನು ಕಟ್ಟಿಸಿದ ಕೆರೆಯ ನೀರನ್ನು ತನ್ನ ಮನದ ಸರ್ವ ಜೀವ ದಯಾಪರತ್ವಗಳು ಎಂದಿಗೂ ಬತ್ತಿ ಹೋಗುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದನು.

***ಎನ್ನ ಭವಭಾರ ನಿಮ್ಮದಯ್ಯ***
***ಎನ್ನ ಹಾನಿ ವೃದ್ಧಿ ನಿಮ್ಮದಯ್ಯ***
***ಎನ್ನ ಕರ ಕರ ಕಾಡದಿರು ತಂದೆ***
***ನಿನ್ನ ಕಾಟ ಎನ್ನ ಪ್ರಾಣದೋಟ***
***ಕಪಿಲಸಿದ್ಧ ಮಲ್ಲಿನಾಥ***
***ಕೊಲ್ಲು ಕಾಯಿ, ನಿಮ್ಮ ಧರ್ಮದವ ನಾನು.***

'ನಿನ್ನ ಕಾಟ ಎನ್ನ ಪ್ರಾಣದ ಓಟ' ಎಂಬ ಮಾತಿನ ಗಾದೆಯಂತಹ ಸಂಕ್ಷಿಪ್ತತೆಯನ್ನು ಗಮನಿಸಿ ಸಿದ್ಧರಾಮ ಮೇಲ್ಮಟ್ಟದ ಕವಿಯಲ್ಲದಿದ್ದರೂ ಅವನು ಭಾಷೆಯ ಬಳಕೆಯಲ್ಲಿ ಎಚ್ಚರವನ್ನು ವಹಿಸಿದ್ದಾನೆ.

***ನೀರ ಕ್ಷೀರದ ಸಂದುಗಳ ಹಂಸ ಬಿಚ್ಚ ಬಲ್ಲುದು, ನೋಡಯ್ಯಾ***
***ದೇಹದ ಜೀವದ ಸಂದ ನೀವು ಬಿಚ್ಚ ಬಲ್ಲಿರಲ್ಲದೆ***
***ನಾನೆಲ್ಲಿ ಬಲ್ಲೆನಯ್ಯ ?***

ನೀರನ್ನು ಹಾಲನ್ನು ಹಂಸ ಬೇರ್ಪಡಿಸಬಲ್ಲದೆಂಬುದು ಪರಂಪರಾಗತವಾಗಿ ಬಂದಿರುವ ಒಂದು ನಂಬಿಕೆ. ಅದೇ ಹಳೆಯ ಸಂಗತಿಯನ್ನು ಸಿದ್ಧರಾಮ ಹೇಳಿರುವ ರೀತಿ ಮಾತ್ರ ವಿಶೇಷ. ಹಂಸ ಅವೆರಡರ ಸಂದನ್ನು ಬಿಚ್ಚಬಲ್ಲದು ಎಂಬ ಮಾತು ಸುಂದರ.

ಸಿದ್ಧರಾಮ ಬಸವಣ್ಣನ ವಚನಗಳಿಗೆ ಮಾರು ಹೋಗಿದ್ದನು. ಇದು ಅವನ ನೂರಾರು ವಚನಗಳಲ್ಲಿ ಕಾಣಬಹುದು. 'ಸಂಸಾರವೆಂಬ ರಾಹುವಿನ ಚಿತ್ರವಾಗಲಿ, ವೇದ ಪ್ರಿಯನಲ್ಲಯ್ಯಾ ನೀನು... ನಾದಪ್ರಿಯನಲ್ಲಯ್ಯ ನೀನು... ಭಕ್ತಪ್ರಿಯ...' ಎಂಬ ವಚನವಾಗಲಿ ಸ್ಪಷ್ಟವಾಗಿ ಬಸವಣ್ಣನ ವರಪ್ರಸಾದಗಳು.

***ಹಸಿವುದೋರದ ಮುನ್ನ, ತೃಷೆದೋರದ ಮುನ್ನ***
***ವ್ಯಾಧಿ ವಿಪತ್ತುಗಳು ಬಂದಡಸದ ಮುನ್ನ***
***ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗನ ಪೂಜಿಸುವ ಮುನ್ನ ಮುನ್ನ***

ಇದು ಬಸವಣ್ಣನ 'ನೆರೆಕೆನ್ನೆಗೆ ತೆರೆಗಲ್ಲಕೆ' ಎಂಬ ಅತ್ಯಂತ ಸುಂದರ ವಚನದ ದುರ್ಬಲ ಅನುಕರಣೆ ಮಾತ್ರ. ಸಿದ್ಧರಾಮ ಬರಿಯ ಅನುಕರಣೆ ಮಾಡುವ ಕೃತಿಕಾರನಾಗಿರದೆ ವಿಶಿಷ್ಟತೆಯನ್ನು ತೋರಿರುವ ವಚನಕಾರನೂ ಆಗಿದ್ದಾನೆ.

ಸಿದ್ಧರಾಮ ತನ್ನ ಕಾಲದ ಅನೇಕ ದುಷ್ಟ ನಡವಳಿಕೆಗಳನ್ನು ಖಂಡಿಸಿದ್ದಾನೆ. ಲಿಂಗ ಕಳೆದು ಹೋಯಿತೆಂದು ಪ್ರಾಣ ಬಿಡುವವನನ್ನು ಕಂಡು ಅವನು ನಡುಗಿ ಹೋದಂತೆ ಒಂದು ಉಲ್ಲೇಖವಿದೆ. ಮೊದ ಮೊದಲು ಸ್ಥಾವರ ಲಿಂಗದಾರಕನಾಗಿದ್ದ ಅವನು ಕೊನೆ ಕೊನೆಗೆ ಅದನ್ನು ಬಿಟ್ಟು ಇಷ್ಟಲಿಂಗಧಾರಕನಾದ ಅವನಲ್ಲಿ ಸ್ಥಾವರಲಿಂಗ ಪೂಜೆಯ ಖಂಡನೆಯೂ ದೊರಕುತ್ತದೆ.

ಚೆನ್ನಬಸವಣ್ಣ ಬಸವಣ್ಣನ ಸೋದರಿ ಅಕ್ಕನಾಗಮ್ಮನ ಮಗ. ಡೋಹರ ಕಕ್ಕಯ್ಯನ ವರಪ್ರಸಾದದಿಂದ ಅವನು ಜನಿಸಿದನೆಂದು ಹೇಳುವ ಕಥೆಗಳು ಉಂಟು. ಅವನಿಗೆ ಬಸವಣ್ಣನೇ ಲಿಂಗೋಪದೇಶವನ್ನು ಮಾಡಿ ಗುರುವಾದ. ಚಿಕ್ಕ ವಯಸ್ಸಿನಲ್ಲೇ ಮಹಾ ವಿದ್ವಾಂಸನು ಜ್ಞಾನಿಯೂ ಆದ ಚೆನ್ನಬಸವಣ್ಣನಲ್ಲಿ ಒಂದು ಅಧಿಕಾರವಾಣಿಯಿದೆ. ಅವನು ವೀರಶೈವ ಧರ್ಮಕ್ಕೆ ಒಂದು ತಾತ್ವಿಕ ನೆಲೆಗಟ್ಟನ್ನು ಒದಗಿಸಿದ ಬುದ್ಧಿಜೀವಿ.

ಚೆನ್ನಬಸವಣ್ಣನ ವಚನಗಳಲ್ಲಿ ಕೆಲವು ಚಿಕ್ಕದಾಗಿದ್ದರೆ ಇನ್ನು ಕೆಲವು ಎರಡು ಅಚ್ಚಿನ ಪುಟಗಳನ್ನು ಮೀರುವಷ್ಟು ದೊಡ್ಡದಾಗಿವೆ. ಇವನಲ್ಲಿ ಸಂಸ್ಕೃತ ಶ್ಲೋಕಗಳ ಉದ್ಧರಣೆ ಹೆಚ್ಚು. ಇವನ ಭಾಷೆಯಲ್ಲಿ ಲಾಲಿತ್ಯ ಸಾಲದು. ಬಸವಣ್ಣನ ಸೂಕ್ಷ್ಮ ಸಂವೇದನಶೀಲತೆಯಾಗಲಿ, ಅಲ್ಲಮನ ನಿಗೂಢತೆಯಾಗಲಿ ಇವನಲ್ಲಿ ತೋರುವುದಿಲ್ಲ. ವಚನಕಾರರಲ್ಲಿ ಪ್ರಮುಖನಾದ ಬಸವಣ್ಣನ ತೀವ್ರ ಪ್ರಭಾವಕ್ಕೆ ಒಳಗಾಗಿರುವ ಇವನಲ್ಲಿ ನೂರಾರು ಕಡೆ ಬಸವಣ್ಣನ್ನು ನೆನಪಿಗೆ ತರುತ್ತವೆ.

***ಉದಯಾಸ್ತಮಾನವೆಂಬುದು ಕೊಳಗದಲ್ಲಿ***
***ಆಯುಷ್ಯವೆಂಬ ರಾಸಿಯನಳೆವರು***
***ರಾಸಿ ತೀರದ ಮುನ್ನ ಸಟೆಯ ಸಡಗರವ ಬಿಟ್ಟು***
***ಶಿವಲಿಂಗಾರ್ಚನೆಯ ಮಾಡುವುದು ಕೂಡಲ ಚನ್ನಸಂಗಮದೇವ.***

ಆಯುಷ್ಯವೆಂಬ ಧಾನ್ಯದ ರಾಶಿಯನ್ನು ದಿನರಾತ್ರಿಗಳೆಂಬ ಕೊಳಗದಲ್ಲಿ ಅಳೆಯುತ್ತಾರೆ ಎಂಬ ಒಳ್ಳೆಯ ಚಿತ್ರದಿಂದ ಆರಂಭವಾದ ಈ ವಚನ ಮುಂದೆ ನುಗ್ಗಿ ಭೋದನೆಗೆ ತೊಡಗುತ್ತಾನೆ. ಇದ ಮಾಡದಿರ್ದಡೆ 'ನಾಯಕ ನರಕ' ಎಂಬ ಶಾಪದ ಮಾತಂತೂ ಆ ಸಂದರ್ಭಕ್ಕೆ ಸಂಪೂರ್ಣ ಅನುಚಿತವಾಗುತ್ತದೆ. ಕಬ್ಬಿನ ರಸವನ್ನು ಸವಿಯಲಾರದ ಹೊರಗಿನ ಎಲೆಯನ್ನು ಮೇಯುವ ಕುರಿಯ ಚಿತ್ರವಾಗಲಿ, ಗಿಳಿಯ ಚಿತ್ರವಾಗಲಿ ಹೀಗೆಯೇ ವಿಫಲವಾಗುತ್ತದೆ.

***ಉರಿಯ ಸೀರೆಯುಟ್ಟು ಕಡೆಸೆರಗ ಬಿಡುಬೀಸಿ***
***ಮಡದಿ ತನ್ನ ಕೆಳದಿಯರೊಡಗೊಂಡು ಆಡುತ್ತಿರೆ***

ಪತಿ ಬಂದು ಸತಿಯೊಡನೆ ಸೇರಿ ಇಬ್ಬರೂ ತಮ್ಮನ್ನು ತಾವು ಮರೆತು ಒಂದಾಗುವ ಚಿತ್ರವು ಜೀವಾತ್ಮ ಪರಮಾತ್ಮರ ಮಿಲನವನ್ನು ಸೊಗಸಾಗಿ ಚಿತ್ರಿಸುತ್ತದೆ.

***ಬೇಡವೋ ಇಲಿಚಯ್ಯಾ***
***ಮೊನ್ನೆ ಬಂದು ನಮ್ಮ ಶಿವದಾರವ ಕಡಿದೆ***
***ನೆನ್ನೆ ಬಂದು ನಮ್ಮ ಸೆಜ್ಜೆಯ ಕಡಿದೆ***

***ಇಂದು ಬಂದು ನಮ್ಮ ವಸ್ತ್ರವ ಕಡಿದೆ***
***ಬೇಡವೋ ಇಲಿಚಯ್ಯಾ !***

ಇದೊಂದು ಅಪೂರ್ವ ವಿಡಂಬನಾತ್ಮಕ ವಚನ 'ಇಲಿಚಯ್ಯ' ಎಂದು ಗೌರವದಿಂದ ಕರೆದಿರುವುದು ಯಾರೋ ಬಂದು ಏನೋ ತೊಂದರೆ ಕೊಟ್ಟಿರಬೇಕು. ಮೊದಲು ಉದಾಸೀನ ಮಾಡಿದ ಚನ್ನಬಸವ ಮತ್ತೆ ಮತ್ತೆ ಮುಂದುವರೆದಾಗ 'ನಿನಗಂಜರು ನಿನ್ನ ಗಣಪತಿಗಂಜರು' ಎಂದು ಅಣಕಿಸಿ ಸ್ಪಷ್ಟ ಉತ್ತರ ಕೊಟ್ಟಂತಿದೆ.

ಸದಾ ತೊಂದರೆ ಕೊಡುವ ಮನುಷ್ಯ ವರ್ಗದ ವಿಡಂಬನೆಯಿದೆ. ಅಥವಾ ವಾಸ್ತವವಾಗಿ ತನಗೆ ತನ್ನ ಮನೆಗೆ ಇಲಿಯಿಂದಾಗುತ್ತಿರುವ ತೊಂದರೆಯನ್ನು ವಚನದ ರೂಪದಲ್ಲಿ ಹೇಳುತ್ತಿರಬಹುದು.

ಚನ್ನಬಸವನನ್ನು ಬರಿಯ ಸಾಹಿತ್ಯದ ದೃಷ್ಟಿಯಿಂದ ನೋಡಿ ವಿಮರ್ಶಿಸುವುದು ಅವನಿಗೆ ಅನ್ಯಾಯ ಮಾಡಿದಂತೆಯೇ ಸರಿ. ಆದರೆ ಅವನ ಒಂದೂವರೆ ಸಹಸ್ರದಷ್ಟು ವಚನಗಳು ನಿಜವಾಗಿಯೂ ವಿಷಯಗಳ ಗಣಿ ತನ್ನ ಕಾಲದ ಸಾಮಾಜಿಕ ವ್ಯವಹಾರಗಳು ಮತ ಪ್ರಾಬಲ್ಯ ಪ್ರಾದೇಶಿಕ ವಿಚಾರಗಳು ಇವುಗಳ ಚಿತ್ರ ದೊರಕುತ್ತದೆ. ವಚನಕಾರರು ಸಾಮಾಜಿಕವಾಗಿ ಏನನ್ನು ಸಾಧಿಸಿದರು ಎಂಬುದರ ವಿವರಗಳನ್ನು ತಿಳಿಯ ಬಯಸುವವರು ಅವರನ್ನು ಬಹಳ ಎಚ್ಚರಿಕೆಯಿಂದ ಅಭ್ಯಾಸ ಮಾಡಬೇಕು.

ವಚನ ಪ್ರಕಾರಕ್ಕೆ ಒಂದು ರೂಪವನ್ನು ಕೊಟ್ಟವನು ಜೇಡರ ದಾಸಿಮಯ್ಯ ಅದನ್ನು ಬೆಳೆಸಿದವರು ಬಸವಣ್ಣ, ಅಲ್ಲಮ, ಅಕ್ಕ, ಸಿದ್ಧರಾಮ ಹಾಗೂ ಚನ್ನ ಬಸವಣ್ಣ. ವಚನ ಸಾಹಿತ್ಯವು ಒಂದು ಮಂದಿರವಾದರೆ ಅದರ ಅಡಿಗಲ್ಲು ದಾಸಿಮಯ್ಯ ಈ ಐವರು ಅದರ ಪಂಚಕಲಶ ಗೋಪುರ.

ವಚನಗಳು ಚಂಪೂ ಕಾವ್ಯಗಳಿಗಿಂತ ಸಂಪೂರ್ಣವಾಗಿ ಬೇರೆಯಾಗಿಯೇ ನಿಲ್ಲುತ್ತವೆ. ಯಾವುದೇ ಸಿದ್ದ ಛಂದೋ ರೂಪವು ಇಲ್ಲಿಲ್ಲ. ಗದ್ಯವೂ ಅಲ್ಲದ ಪದ್ಯವೂ ಅಲ್ಲದ ಒಂದು ಬಗೆಯ ಮುಕ್ತ ಛಂದಸ್ಸು ಅವುಗಳದು. ಕೃತಿಕಾರ ತನಗೆ ಅನಿಸಿದ್ದನ್ನು ಸ್ವಚ್ಛಂದವಾಗಿ ಅಭಿವ್ಯಕ್ತಪಡಿಸಲು ಸಾಧ್ಯ. ವಚನಗಳಲ್ಲಿ ಹಾಗೆ ನೋಡಿದರೆ ಅದೇ ಮುಖ್ಯ. ತನ್ನ ಸುಖ, ದುಃಖ, ಕೋಪ, ತಾಪ ಸಮಾಜದ ಬಗ್ಗೆ ತನಗೆ ಅನಿಸಿದ್ದನ್ನು ತೀವ್ರವಾದ ಅನುಭವಗಳು, ಇವುಗಳನ್ನು ವಚನಕಾರರು ಹೇಳಿಕೊಂಡರು. ಕನ್ನಡ ಸಾಹಿತ್ಯಕ್ಕೆ ವೈಯಕ್ತಿಕ ಪ್ರಪಂಚ ಬಂದದ್ದೇ ವಚನಕಾರರಿಂದ. ಈ ಸಾಹಿತ್ಯದಲ್ಲಿ ಕಾಲ್ಪನಿಕ ಜಗತ್ತಿಗಿಂತ ವ್ಯಕ್ತಿಯ ಒಳಜಗತ್ತಿನ ಚಿತ್ರಣ ದೊರಕುತ್ತದೆ. ವಚನಕಾರರೂ ಅಂತಹ ಜಗತ್ತನ್ನು ತಮ್ಮ ಸಂವೇದನೆಗೆ ಒಳಗಾದ ಜಗತ್ತನ್ನು ಕನ್ನಡಕ್ಕೆ ಬಂದದ್ದು ವಚನಕಾರರ ಮೂಲಕವೇ ಎಂದರೆ ಅಂತಹ ಉತ್ಪ್ರೇಕ್ಷೆಯೇನು ಆಗಲಾರದು.

**ಪರಾಮರ್ಶನ ಗ್ರಂಥಗಳು**


- ಚಿದಾನಂದ ಮೂರ್ತಿ, ಎಂ, (2011). *ವಚನ ಸಾಹಿತ್ಯ.* ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಸಂಪುಟ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.
- ನಾಗಭೂಷಣಸ್ವಾಮಿ, ಓ.ಎಲ್. (ಸಂ.). (2004). *ವಚನ ಸಾವಿರ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

- ನಾರಾಯಣ, ಪಿ.ವಿ. (1983). *ವಚನ ಸಾಹಿತ್ಯ: ಒಂದು ಸಾಂಸ್ಕೃತಿಕ ಅಧ್ಯಯನ.* ವೀರಶೈವ ಅಧ್ಯಯನ ಸಂಸ್ಥೆ.
- ನಾವಲಗಿ, ಸಿ.ಕೆ. (2015). *ಶರಣ ಸಂಪದ.* ಕನ್ನಡ ವಚನ ಸಾಹಿತ್ಯ ಪುಸ್ತಕ ಮಾಲೆ, ಶ್ರೀ ಶೂನ್ಯ ಸಂಪಾದನ ಮಠ, ಗುರುವಾರಪೇಟೆ. ಗೋಕಾಕ್.